"ಅಯ್ಯೋ ಅಸ್ಥಿಪಂಜರವೇ... ಇನ್ನೂ ತಯಾರಾಗಿಲ್ವ ನೀನು?"
ಜೀನ್ಸ್ ಪ್ಯಾಂಟು ತೊಟ್ಟು, ತೋಳಿನ ಬನಿಯನ್ ಧರಿಸಿ ಇನ್ನೇನು ಅಂಗಿ ಹಾಕಿಕೊಳ್ಳಬೇಕೆನ್ನುವಷ್ಟರಲ್ಲಿ ಮಹಡಿಯ ಮೇಲಿನ ನನ್ನ ಸಿಂಗಲ್ ರೂಮಿನ ಬಾಗಿಲು ದಡದಡನೆ ಸದ್ದು ಮಾಡಿತ್ತು. ಅದರ ಜೊತೆಗೇ ಘಲಘಲಿಸಿದ, ಕೈಬಳೆಗಳೆರೆಡು ಪರಸ್ಪರ ಸೋಕಿಕೊಂಡ ಶಬ್ದ ಬಾಗಿಲು ಬಡಿಯುತ್ತಿರುವುದು ವೈಷ್ಣವಿಯೇ ಎಂಬುದನ್ನು ಸಾಬೀತುಪಡಿಸಿತ್ತು. ಹಾಕಿಕೊಳ್ಳಬೇಕಿರುವ ಅಂಗಿಯನ್ನು ಕೈಯಲ್ಲೇ ಹಿಡಿದು ಬಾಗಿಲು ತೆರೆದರೆ ತಲೆಯಿಂದ ಕಾಲಿನ ತನಕ ಫುಲ್ ಪ್ಯಾಕಪ್ ಆಗಿ, ತೋಳಲ್ಲಿ ವ್ಯಾನಿಟಿ ಬ್ಯಾಗನ್ನೂ, ಬೆನ್ನಲ್ಲಿ ಇನ್ನೊಂದು ಬ್ಯಾಗನ್ನೂ ಧರಿಸಿದ ವೈಷ್ಣವಿಯೆಂಬ ಐದಡಿಯ ಆಕಾರ ''ಅಸ್ಥಿಪಂಜರವೇ'' ಎನ್ನುತ್ತಾ ಪ್ರತ್ಯಕ್ಷವಾಯಿತು.

''ಅಲ್ವೇ ಹಿಡಿಂಬೆ, ಬಸ್ಸಿರೋದೇ ಹತ್ತೂವರೆಗೆ. ಈಗಿನ್ನೂ ಗಂಟೆ ಎಂಟೂ ಆಗಿಲ್ಲ, ಅಷ್ಟರಲ್ಲೇ ಗಡಿಬಿಡಿ ಮಾಡ್ತೀಯಲ್ಲೇ? ಅಲ್ಲಿ ಕೆಎಸ್‌ಆರ್‌ಟಿಸಿ ಸ್ಟಾಪಿನ ಕಲ್ಲು ಬೆಂಚಿನ ಮೇಲೆ ಕೂತು ತೂಕಡಿಸೋದಕ್ಕೆ ಇಷ್ಟು ಅರ್ಜೆಂಟಾ ನಿಂಗೆ?"

ಬಾಗಿಲಿಗಡ್ಡ ನಿಂತ ನನ್ನನ್ನು ತಳ್ಳಿಕೊಂಡೇ ಒಳಬಂದಳನ್ನು ಪ್ರಶ್ನಿಸಿದೆ. "ಅದೆಲ್ಲ ಆಮೇಲೆ ಹೇಳ್ತೀನಿ. ನೀನೀಗ ಬೇಗ ಹೊರಡು'' ಎನ್ನುತ್ತಾ ಮಂಚದ ಮೇಲಿದ್ದ ಜಯಂತ ಕಾಯ್ಕಿಣಿಯವರ 'ತೂಫಾನ್ ಮೇಲ್' ಕಥಾಸಂಕಲನವನ್ನು ತಿರುವಿಹಾಕತೊಡಗಿದಳು. ನಾನು ಶರ್ಟ್‌ನ ಗುಂಡಿ ಹಾಕಿಕೊಳ್ಳುತ್ತಾ ಕನ್ನಡಿಯತ್ತ ನಡೆದೆ.

ದೀಪಾವಳಿಗೆ ಊರಿಗೆ ಹೋಗುವುದು ಆರು ವರ್ಷಗಳ ಬೆಂಗಳೂರಿನ ಬದುಕಿನಲ್ಲಿ ನಾನು ಒಂದು ಬಾರಿಯೂ ತಪ್ಪಿಸದೇ ಅನುಸರಿಸಿಕೊಂಡು ಬಂದಿರುವ ಅಭ್ಯಾಸ. 'ಮಾಮ ಬಂದಾ' ಎಂದು ಖುಷಿಯಿಂದ ಕುಣಿಯುವ ಪಕ್ಕದ ಮನೆಯ ಆಕಾಂಕ್ಷುವಿನ ಜೊತೆ ಗುಡ್ಡದ ಮೇಲೆಲ್ಲಾ ಅಲೆಯುತ್ತಾ ಪಟಾಕಿ ಹೊಡೆಸುವುದು ದಶಕದಾಚೆ ಬಿಟ್ಟು ಬಂದ ಬಾಲ್ಯಕ್ಕೆ ಮತ್ತೆ ಹತ್ತಿರವಾಗಿಸುವ ಆಟ. ಆದರೆ ಈ ಬಾರಿಯ ವಿಶೇಷವೆಂದರೆ ಜೊತೆಯಲ್ಲಿ ವೈಷ್ಣವಿಯೂ ಇರುವುದು. "ನಾನು ವಿಹಾರ್‌ನ ಮನೆಗೇ ಬರ್ತಿದ್ದೀನಿ. ನೀನೂ ಅಲ್ಲಿಗೇ ಬಾ" ಎಂಬ ಕಟ್ಟಪ್ಪಣೆ ಸಾಗರದಲ್ಲಿರವ ಅವಳ ಅಮ್ಮನಿಂದ ಬಂದ ಮರುಕ್ಷಣವೇ ವೈಷ್ಣವಿ ನನಗೆ ಮೆಸೇಜ್ ರವಾನಿಸಿದ್ದಳು.

"ಅಮ್ಮ ಹಬ್ಬಕ್ಕೆ ನಿಮ್ಮನೆಗೇ ಬರ್ತಾಳಂತೆ. ಒಂದಿನ ಜಾಸ್ತಿ ರಜ ಹಾಕೋ... ಪಣಂಬೂರು ಬೀಚಿಗೆ ಹೋಗಿಬರೋಣ ಮಧು ಕಾರಲ್ಲಿ. ಅದೇ... ನಿನ್ನ ಹುಡುಗಿಯ ಊರಿಗೆ."

ನನ್ನ ಹುಡುಗಿಯ ಊರು...

ಕೇಳಲು ಹಿತವೆನಿಸಿತ್ತು. ಜೊತೆಜೊತೆಗೆ ಕೈಹಿಡಿದು ಒಂದು ಹೆಜ್ಜೆಯಾದರೂ ನಡೆಯಲಿಲ್ಲ. ಎದುರು ಬದುರಾಗಿ ಕುಳಿತು ಒಂದು ಲೋಟ ಕಾಫಿಯನ್ನೂ ಗುಟುಕರಿಸಲಿಲ್ಲ. ಒಬ್ಬರು ಇನ್ನೊಬ್ಬರಿಗಾಗಿ ದಾರಿಯಲ್ಲಿ ನಿಂತು ಕಾಯಲಿಲ್ಲ. ಸಂಜೆಯ ಕಲ್ಲು ಬೆಂಚಿನಲ್ಲಿ ಒಬ್ಬರಿಗೊಬ್ಬರು ಆತು ಕುಳಿತು ನೆನಪಿನ ಜೋಳಿಗೆಯಿಂದ ಹಳೆಯದೊಂದು ಖುಷಿಯನ್ನೋ, ನೋವನ್ನೋ ಆಚೆತೆಗೆದು ಹೇಳುತ್ತಾ ಹೆಗಲಿಗೆ ತಲೆಯಾನಿಸಲಿಲ್ಲ...

ಅದರೂ ಅವಳು ನನ್ನ ಹುಡುಗಿ.

ನನ್ನ ನೂರು ಕರೆ, ಬಿನ್ನಹಗಳಿಗೆ ಕಿವುಡಿಯಾಗಿ ನಡೆದುಹೋದಳು. ಒಂದು ಹೊರಳು ನೋಟಕ್ಕಾಗಿ ಕಾದು ನಿಂತ ನನ್ನೆಡೆಗೆ ತಿರುಗಿಯೂ ನೋಡದೆ ಹೊರಟುಹೋದಳು. ಈ ಹೊತ್ತಿಗೆ ಅದ್ಯಾವುದೋ ನೂರು ಬೋಟುಗಳ ಒಡೆಯನ ತೋಳಿನಲ್ಲಿ ಬಂಧಿಯಾಗಿ ನನಗೆಂದೂ ಎಟುಕದ ಸಮುದ್ರದಲ್ಲಿ ವಿಹರಿಸುತ್ತಿರುವಳು.